

ಮುಡಿಪು ಕಟ್ಟಿದಂತೆ ವಯಸು ಧಾರೆ ಎರೆದಳೋ ಗಂಗೆ
ಕೊರಡಾದ ಶಿವನ ಮನಸು ಕರುಣದಿಂದ ಕರಗಿದಂಗೆ ॥
ಅಪ್ಪಿಕೊಂಡಳು ಶಿವನ ಆಸೆಯೆಲ್ಲ ತೀರುವಂಗೆ
ಹೊಸ ಬೆಸುಗೆಯ ಕಂಡ ಶಿವ ತನ್ನಲಿ ತಾ ನಗುವಂಗೆ ॥

ಧರೆಯ ಲಿಂಗವ ಗಂಗೆ ತನುವಿಂದ ತಣಿಸಿದಳು
ಮಣ್ಣ ಗಮಿಲಿಗೊಲಿದಂಗೆ ಜಗವೇ ಮೈ ಮರೆತಂಗೆ ॥
ನೀರ ಮೈಯೊಳಗಿಂದ ಗಾಳಿಗುಳ್ಳೆಯು ಚಿಮ್ಮಿ
ವಾಯು ಲಿಂಗಶಿವನಿಗೆ ವಂದನೆಯ ಸಲ್ಲುವಂಗೆ ॥

ಗಗನ ಗಂಗ ಆಕಾಶವು ಲಿಂಗವನು ಮುಟ್ಟುವಂಗೆ
ಶೂನ್ಯದಲಿ ಶೃಂಗಾರ ಮೌನದಲಿ ಹುಟ್ಟಿದಂಗೆ ॥
ಜಲದ ಲಿಂಗಧರನನ್ನು ಆಸೆಯಿಂದ ಕೂಡುವಂಗೆ
ನೀರು ನೀರು ಘರ್ಷಿಸಿಲು ಕಿಚ್ಚಿನಮಳೆ ಸುರಿದವಂಗೆ॥

ತೇಜಲಿಂಗವನ್ನು ಗಂಗೆ ಆತು ತಾ ಕೊಂಡಳಂಗೆ
ಹರನ ಕಣ್ಣು ತಂಪಾಯ್ತು ಕಾಮ ದಹನವಾದಂಗೆ ॥
ಪಂಚಲಿಂಗದೊಡನೆ ಗಂಗೆ ಪಗಡೆಯಾಟ ಆಡುವಾಗ
ಸೋತಂಗೆ ಸೋತ ಗೆದ್ದ ಹರನು ತಾ ವಿಲಾಸದಿಂದ॥

ಎಳೆತುಟಿಗಳನ್ನು ಹರನು ತಾಂಬೂಲ ಮೆಲ್ಲುವಾಗ
ನುಂಗಿದೊಡನೆ ಜೊಲ್ಲುರಸ ನಂಜು ಕೊಂಚ ಇಳಿವಂಗೆ ॥
ದೇವಗಣದ ದಂಡು ಬಂತು ಅಕ್ಷತೆಯನು ಚೆಲ್ಲಿ ತಂತು
ಬೆಚ್ಚಿ ಎದ್ದಳಾಗ ಗಂಗೆ ಕನಸು ಕರಗಿಹೋದಂಗೆ ॥

ಗಂಗೆಗುಚ್ಚು ಬಂದಂಗೆ ಸಹನೆಜಾರಿ ತಿರುಗಿದಂಗೆ
ಮೋಹದಿಂದ ಶಿವನಾಗ ಕಟ್ಟುಮುಡಿಯ ಬಿಚ್ಚಿದಂಗೆ ॥
ಹನಿ ಹನಿ ಹನಿಯಾಗಿ ಗಂಗೆ ನೆತ್ತಿ ಮೇಲೆ ಜಾರುವಂಗೆ
ವಿಭೂತಿಯ ಜೊತೆ ಬೆರತು ತಾನೇ ತೀರ್ಥವಾದಂಗೆ ॥

ಮುಕ್ಕಣ್ಣಿನ ರೆಪ್ಪೆ ಮೇಲೆ ನಿಂತವಳೆ ಗಂಗೆ
ಹಬೆಗೆ ತಾ ಕರಗಿದಂಗೆ ಆವಿಯಾಗಿ ಹೋದಂಗೆ ॥
ಕೆಂಪ ಮೂಗುಮೊನೆಯಲ್ಲಿ ಮೂಗುತಿಯು ತೂಗುವಂಗೆ
ನೀರ ಹನಿ ಮುತ್ತು ಮಣಿ ಮೋಹನ ತಾ ಮೆರೆದಂಗೆ ॥

